
# ಪ್ರತಿಭಾ ಸಂದರ್ಶನ

**‘ಮಯೂರ’ ದ 48 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ ‘ನವಿಲುಗರಿ’ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಮುಂದಿಡುತ್ತದೆ. ಈ ನವಿಲುಗರಿಗಳು ಹಲವು ಓದುಗರ ನೆನಪುಗಳನ್ನು ಮಧುರವಾಗಿ ನೇವರಿಸುವುದಲ್ಲದೇ ಹೊಸ ಓದುಗರಿಗೆ ಹಳೆಯ ಬರಹಗಳ ಅಂದವನ್ನು ಪರಿಚಯಿಸುತ್ತವೆ. ಇದು, 1969 ರ ಡಿಸೆಂಬರ್ ತಿಂಗಳ ಸಂಚಿಕೆಯಿಂದ ಆಯ್ದ ಬರಹ.**

**ರಾಮಚಂದ್ರ ಶರ್ಮ**



ಅದುವರೆಗಿನ ತಮ್ಮ ಬದುಕು ಆಗಿಹೋದದ್ದು, ಈ ಗಳಿಗೆ ಅಥವಾ ಮುಂದಿನ ಗಳಿಗೆ ಮುಖ್ಯ ಎನ್ನುವ ಮನೋಭಾವವಿರುವ ಜನ ಇಸವಿಗಳಿಗೆ ಜೋಡಿಸಿದ ವಿವರಗಳನ್ನು ಕೊಟ್ಟು ಸುಮ್ಮನಾಗಿಬಿಡುತ್ತಾರೆ. ರಾಮಾನುಜನ್ ಹುಟ್ಟಿದ್ದು ಮೈಸೂರು ನಗರದಲ್ಲಿ. ಇಸವಿ 1929. ಮೈಸೂರಲ್ಲಿ ವಿದ್ಯಾಭ್ಯಾಸ. ನನಗೆ ಹದಿನೇಳು ವಯಸ್ಸಿನವರೆಗೂ ನಾನೊಂದು ಪ್ರತ್ಯೇಕ ಅಸ್ತಿತ್ವ ಇರುವ ಜೀವಿ ಅನ್ನಿಸಿರಲಿಲ್ಲ. ವಿಷಯಸೂಚಿ ಇದ್ದಂಥ ಉತ್ತರಗಳಿಂದ ಭಿನ್ನವಾಗಿ ಅವರಾಡಿದು ಇದೊಂದೇ.

‘ಏನು ನಿಮ್ಮ ಮಾತಿನ ಅರ್ಥ?’

ಪ್ರಶ್ನೆಗೆ ಉತ್ತರ ಸಿಗಲಿಲ್ಲ.

ಉತ್ತರ ಅವರ **‘Self–Portrait’** ಅನ್ನುವ ಇಂಗ್ಲಿಷ್ ಕವನದಲ್ಲಿಯೇ?

**I resemble everyone**
**but myself, and sometimes ser**
**in shop– windows,**
**despite the well –known laws**
**of optics,**
**the portrait of a stranger,**